ಒಂದು ಕಾಯಿದೆ ತರುವ ಬಗ್ಗೆ ಕೇಂದ್ರ ಸರ್ಕಾರದೊಂದಿಗೆ ಸಮಾಲೋಚಿಸುವುದು ಸೂಕ್ತವೆಂದು ಅಭಿಪ್ರಾಯ ವ್ಯಕ್ತವಾಗಿದೆ.

ಈ) ರಾಜ್ಯ ಸರ್ಕಾರವು ಈಗಾಗಲೇ ದಾಖಲಿಸಿರುವ ಮರು ಪರಿಶೀಲನಾ ಅರ್ಜಿಯ ಬಗ್ಗೆ ಮಾನ್ಯ ಸರ್ವೋಚ್ಚ ನ್ಯಾಯಾಲಯದ ಸಂವಿಧಾನಾತ್ಮಕ ಪೀಠವು ನೀಡುವ ತೀರ್ಪನ್ನು ಅನುಸರಿಸಿ ಮುಂದಿನ ಕ್ರಮ ವಹಿಸಲಾಗುವುದು.

ಉ) ಈಗಾಗಲೇ ಸಲ್ಲಿಕೆಯಾಗಿರುವ ಮರು ಪರಿಶೀಲನಾ ಅರ್ಜಿಯ ಕುರಿತು ಸರ್ವೋಚ್ಚ ನ್ಯಾಯಾಲಯದ ಸಂವಿಧಾನಾತ್ಮಕ ಪೀಠದ ತೀರ್ಪು ಹೊರಬಿದ್ದ ನಂತರ ಪರ್ಯಾಯ ಮಾರ್ಗಗಳ ಬಗ್ಗೆ ಪರಿಶೀಲಿಸಲಾಗುವುದು.

ಪಠ್ಯ ಪುಸ್ತಕ ಅಕ್ರಮ ಮಾರಾಟ

1444(2328), ಡಾ: ಸುಧಾಕರ್ ಕೆ. (ಚಿಕ್ಕಬಳ್ಳಾಪುರ)

ಅ) ಪಿ.ಯು.ಸಿ. ಪಠ್ಯ ಪುಸ್ತಕಗಳ ಅಕ್ರಮ ಮಾರಾಟದ ಬಗ್ಗೆ ನಡೆಸಿದ ಇಲಾಖೆ ಮಟ್ಟದ ತನಿಖೆ ಪೂರ್ಣಗೊಂಡಿದೆಯೇ; (ವಿವರ ನೀಡುವುದು)

ಆ) ಟೆಂಡರ್ ಪ್ರಕ್ರಿಯೆಯಲ್ಲಿ ಆಗಿರುವ ಗೊಂದಲಗಳೇನು, ಈ ಸಮಸ್ಯೆಗೆ ಇಲಾಖೆ ಕೈಗೊಂಡಿರುವ ಕ್ರಮಗಳೇನು; (ವಿವರ ಒದಗಿಸುವುದು)

ಇ) ಪಠ್ಯ ಪುಸ್ತಕ ಮುದ್ರಣಕ್ಕೆ ಕರೆದಿರುವ ಟೆಂಡರ್ ಪ್ರಕ್ರಿಯೆಯ ವಿವರಗಳೇನು; ಆಯ್ಕೆಗೆ ಬಳಸಿದ ಮಾನದಂಡ ಏನು;

ಈ) ಪುಸ್ತಕ ಮುದ್ರಣಕ್ಕೆ ಪ್ರತಿ ವರ್ಷ ಎಷ್ಟು ಹಣ ವ್ಯಯ ಮಾಡಲಾಗುತ್ತಿದೆ, ಹಳೆ ಪಠ್ಯ ಪುಸ್ತಕಗಳ ಬಳಕೆಗೆ ಉತ್ತೇಜನ ನೀಡದೇ ಇರಲು ಕಾರಣವೇನು; ಪುಸ್ತಕಗಳ ಮರು ಬಳಕೆ

ಮಾಡಿದರೆ ಸರ್ಕಾರದ ಬೊಕ್ಕಸಕ್ಕೆ ಸಾಕಷ್ಟು ಹಣ ಉಳಿತಾಯ ಆಗುವುದೇ;

ಉ) ಹಳೆ ಪಠ್ಯ ಪುಸ್ತಕಗಳ ಬಳಕೆಗೆ ಸರ್ಕಾರ ಯಾವುದಾದರೂ ಕ್ರಮ ಕೈಗೊಂಡಿದೆಯೇ; (ವಿವರ ನೀಡುವುದು)

ಊ) ಈ ವರ್ಷದ ಪಠ್ಯ ಪುಸ್ತಕ ಪೂರ್ಣಗೊಂಡಿದೆಯೇ, ಇಲ್ಲವಾದರೆ, ಯಾವಾಗ ಪೂರ್ಣಗೊಳ್ಳಲಿದೆ?

ಶ್ರೀ ಕಿಮ್ಮನೆ ರತ್ನಾಕರ್ (ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು)

ಅ) 2013–14ನೇ ಶೈಕ್ಷಣಿಕ ಸಾಲಿನ ಮುದ್ರಕರು ಸುಭಾಷ್ ಎಂಟರ್‌ಪ್ರೈಸಸ್, ಬೆಂಗಳೂರು ಇವರನ್ನು ಮುಖ್ಯ ವಿತರಕರನ್ನಾಗಿ ಮಾಡಿದ್ದು, ಕಳೆದ ವರ್ಷದಲ್ಲಿ ಉಳಿಕೆಯಾದ ಪುಸ್ತಕಗಳು ಗೋದಾಮಿನಲ್ಲಿವೆ ಎಂದು ತಿಳಿಸಿರುತ್ತಾರೆ. ಈ ಕುರಿತು ತನಿಖೆ ಪೂರ್ಣಗೊಂಡಿರುವುದಿಲ್ಲ.

ಆ) ಕರ್ನಾಟಕ ಪಠ್ಯ ಪುಸ್ತಕ ಸಂಘವು ಟೆಂಡರ್ ಪ್ರಕ್ರಿಯೆಯನ್ನು ನಿಯಮಾನುಸಾರ ನಡೆಸುತ್ತದೆ. ಟೆಂಡರ್ ಪ್ರಕ್ರಿಯೆಯಲ್ಲಿ ಯಾವುದೇ ಗೊಂದಲಗಳಾಗಿರುವುದಿಲ್ಲ.

ಇ) ಪಿ.ಯು.ಸಿ. ಪಠ್ಯ ಪುಸ್ತಕಗಳ ಮುದ್ರಣಕ್ಕೆ ಕರ್ನಾಟಕ ಪಠ್ಯ ಪುಸ್ತಕ ಸಂಘವು ಕೆ.ಟಿ.ಟಿ.ಪಿ. ನಿಯಮಗಳಡಿಯಲ್ಲಿ 02 ಹಂತಗಳಲ್ಲಿ ಟೆಂಡರ್‌ನ್ನು ಇ–ಪೋರ್ಟಲ್ ಮೂಲಕ ಕರೆಯಲಾಗಿದೆ. 1ನೇ ಹಂತದ ಟೆಂಡರ್‌ನ್ನು ದಿನಾಂಕ:25.02.2014ರಂದು ಕರೆಯಲಾಗಿದೆ. ಈ ಹಂತದಲ್ಲಿ ಮುದ್ರಣಕ್ಕೆ ಸಿದ್ಧವಿರುವ ಶೀರ್ಷಿಕೆಗಳಾದ ಪ್ರಥಮ ಪಿ.ಯು.ಸಿ. ತರಗತಿಯ ಎಲ್ಲಾ ಪಠ್ಯ ಪುಸ್ತಕಗಳು ಹಾಗೂ ದ್ವಿತೀಯ ಪಿ.ಯು.ಸಿ. ತರಗತಿಯ ಪಿ.ಸಿ.ಎಂ.ಬಿ. ವಿಷಯಗಳ ಪಠ್ಯ ಪುಸ್ತಕಗಳ ಮುದ್ರಣ ಮತ್ತು ಮಾರಾಟಕ್ಕೆ ಟೆಂಡರ್ ಕರೆಯಲಾಗಿದೆ. ಆಯ್ಕೆಯಾಗಿದ್ದ ಮೆ.ಅಭಿಮಾನಿ ಸಮೂಹದ ಮುದ್ರಕರು ತಕರಾರು

ಅರ್ಜಿ ಸಲ್ಲಿಸುವ ಮೂಲಕ ಮತ್ತು ನ್ಯಾಯಾಲಯದಲ್ಲಿ ದಾವೆ ಹೂಡಿದ್ದರು. ಈ ಕಾರಣಕ್ಕಾಗಿ ಕಾರ್ಯಾದೇಶ ನೀಡಲು ವಿಳಂಬವಾಗಿರುತ್ತದೆ. ದಿನಾಂಕ:27.05.2014ರಂದು 10 ಪ್ಯಾಕೇಜುಗಳಿಗೆ ಹಾಗೂ ದಿನಾಂಕ:02.06.2014ರಂದು 03 ಪ್ಯಾಕೇಜುಗಳಿಗೆ ಕಾರ್ಯಾದೇಶ ಪಡೆದು ಪುಸ್ತಕಗಳನ್ನು ಮುದ್ರಿಸುತ್ತಿದ್ದಾರೆ.

2ನೇ ಹಂತದ ಟೆಂಡರ್‌ನಲ್ಲಿ ದ್ವಿತೀಯ ಪಿ.ಯು.ಸಿ. ತರಗತಿಗೆ ಹೊಸದಾಗಿ ಜಾರಿಗೊಳಿಸಿದ್ದ ಭಾಷಾ, ಕಲೆ ಮತ್ತು ವಾಣಿಜ್ಯ ವಿಷಯಗಳ ಪಠ್ಯ ಪುಸ್ತಕಗಳ ಮುದ್ರಣ ಮತ್ತು ಮಾರುಕಟ್ಟೆ ದಿನಾಂಕ:24.02.2014ರಂದು ಟೆಂಡರ್ ಕರೆಯಲಾಗಿತ್ತು. ಸದರಿ ಟೆಂಡರ್‌ನ ತಾಂತ್ರಿಕ ಬಿಡ್‌ನ್ನು ದಿನಾಂಕ:07.04.2014ರಂದು ಮತ್ತು ಆರ್ಥಿಕ ಬಿಡ್‌ನ್ನು ದಿನಾಂಕ:11.04.2014ರಂದು ಕರೆದು ಮುದ್ರಕರಾದ ಮೆ: ವೆಂಕಟೇಶ್ವರ ಮತ್ತು ಮೆ: ವಿನಾಯಕ ಆಫ್‌ಸೆಟ್ ಪ್ರಿಂಟರ್ಸ್ ಅವರಿಗೆ ದಿನಾಂಕ:06.05.2014ರಂದು ಕಾರ್ಯಾದೇಶ ನೀಡಲಾಗಿದೆ.

ಇ-ಪೋರ್ಟಲ್ ಮೂಲಕ ಟೆಂಡರ್ ಕರೆಯುವುದರಿಂದ ಇ-ಪೋರ್ಟಲ್ ಹಂತದಲ್ಲಿಯೇ ಕಡಿಮೆ ದರ ಸೂಚಿಸಿರುವ ಮುದ್ರಕರನ್ನು ಆಯ್ಕೆ ಮಾಡಲಾಗುತ್ತದೆ.

ಈ) ಪಿ.ಯು.ಸಿ. ಪಠ್ಯ ಪುಸ್ತಕಗಳ ಮುದ್ರಣಕ್ಕೆ ಸರ್ಕಾರ ಯಾವುದೇ ಹಣ ಖರ್ಚು ಮಾಡುವುದಿಲ್ಲ. ಬದಲಾಗಿ ಮುದ್ರಣ ಮತ್ತು ಮಾರಾಟಕ್ಕಾಗಿ ಆಯ್ಕೆಯಾದ ಮುದ್ರಕರೇ ಮುದ್ರಣ ಮತ್ತು ಸಾಗಾಣಿಕೆ ಹಾಗೂ ಇನ್ನಿತರೆ ವೆಚ್ಚಗಳನ್ನು ಭರಿಸಬೇಕಾಗುತ್ತದೆ. ಸರ್ಕಾರದ ಅನುಮೋದಿತ ಪಠ್ಯ ವಿಷಯದ ಮೇಲೆ ರಚಿತವಾದ ಪಠ್ಯ ಪುಸ್ತಕಗಳ ಮುದ್ರಣ ಮತ್ತು ಮಾರಾಟದ ಹಕ್ಕನ್ನು ಆಯ್ಕೆ ಆಗುವ ಮುದ್ರಕರಿಗೆ ನೀಡಲಾಗುವುದರಿಂದ ಮುದ್ರಿಸಬೇಕಾದ ಪುಸ್ತಕಗಳ ಒಟ್ಟು ಮೌಲ್ಯದ ಶೇ. 14.2 ಪಿ.ಸಿ.ಎಂ.ಬಿ. ವಿಷಯಗಳಿಗೆ 17.2% ರಷ್ಟು ರಾಯಧನ/ಸೇವಾ ಶುಲ್ಕವನ್ನು ಸರ್ಕಾರ/ಕರ್ನಾಟಕ ಪಠ್ಯ ಪುಸ್ತಕ

ಸಂಘಕ್ಕೆ ಪಾವತಿ ಮಾಡಬೇಕಾಗುತ್ತದೆ. ಈ ಹಣ 2014–15ನೇ ಸಾಲಿನಲ್ಲಿ ಸುಮಾರು ₹ 10.00 ಕೋಟಿಗಳಷ್ಟು ಆಗಿರುತ್ತದೆ.

ವಿದ್ಯಾರ್ಥಿಗಳು ತಮಗೆ ಯಾವ ಪಠ್ಯ ಪುಸ್ತಕಗಳ ಅಗತ್ಯವಿದೆಯೋ ಅಂತಹ ವಿಷಯಗಳ ಪುಸ್ತಕಗಳನ್ನು ತಾವೇ ಸ್ವತಃ ಹಣ ಕೊಟ್ಟು ಅಂಗಡಿಗಳಿಂದ ಖರೀದಿಸಿ ಬಳಸುತ್ತಾರೆ. ಇಂತಹ ಸಂದರ್ಭವಿದ್ದಾಗ ಹಳೆಯ ಪಠ್ಯಪುಸ್ತಕಗಳ ಬಳಕೆಯ ಪ್ರಶ್ನೆ ಉದ್ಭವಿಸುವುದಿಲ್ಲ. ಈ ಕಾರಣದಿಂದ ಪ್ರತೀ ವರ್ಷವೂ ಸಹ ವಿದ್ಯಾರ್ಥಿಗಳ ಸಂಖ್ಯೆ ಹಾಗೂ ನಿರ್ದಿಷ್ಟ ವಿಷಯಗಳಲ್ಲಿನ ವಿದ್ಯಾರ್ಥಿಗಳ ಸಂಖ್ಯೆಯನ್ನು ಆಧರಿಸಿ ಹೊಸ ಹೊಸ ಪಠ್ಯ ಪುಸ್ತಕಗಳನ್ನು ಇಲಾಖೆ ಮುದ್ರಿಸಬೇಕಾಗುತ್ತದೆ.

ಊ) ವಿದ್ಯಾರ್ಥಿಗಳು ಪಠ್ಯ ಪುಸ್ತಕಗಳನ್ನು ಹಣ ಪಾವತಿಸಿ, ಖರೀದಿಸುವುದರಿಂದ ಪಠ್ಯ ಪುಸ್ತಕಗಳ ಮರು ಬಳಕೆ ಬಗ್ಗೆ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

ಋ) 2014–15ನೇ ಸಾಲಿನ ಪಿ.ಯು.ಸಿ. ಪಠ್ಯ ಪುಸ್ತಕಗಳ ಮುದ್ರಣ ಮತ್ತು ಮಾರಾಟ ವ್ಯವಸ್ಥೆಯನ್ನು ಪ್ರಕಾಶನ ಹಕ್ಕನ್ನು ಪಡೆದ ಮುದ್ರಕರೇ ನೋಡಿಕೊಳ್ಳುತ್ತಾರೆ. ಶೇ. 93ರಷ್ಟು ಪಠ್ಯ ಪುಸ್ತಕಗಳು ಮುದ್ರಣಗೊಂಡು ಮಾರುಕಟ್ಟೆಗೆ ಪೂರೈಕೆಯಾಗಿವೆ. ಉಳಿಕೆ ಪುಸ್ತಕಗಳು ಜುಲೈ 15ರ ಒಳಗಾಗಿ ಮಾರುಕಟ್ಟೆಯಲ್ಲಿ ಲಭ್ಯವಿರುತ್ತವೆ.

ಹೊಸದಾಗಿ ಪ್ರೌಢ ಶಿಕ್ಷಣ ಶಾಲೆಗಳ ಪ್ರಾರಂಭ

1445(413), ಡಾ॥ ಉಮೇಶ್ ಜಿ.ಜಾಧವ್(ಚಿಂಚೋಳಿ)

ಅ) ಚಿಂಚೋಳಿ ಮತಕ್ಷೇತ್ರದ ವ್ಯಾಪ್ತಿಗೆ ಬರುವ ಆಂಧ್ರದ ಗಡಿಗೆ ಹೊಂದಿಕೊಂಡ ವೆಂಕಟಾಪುರ ಹಾಗೂ ಸಲಗರ ಬಸಂತಪುರ ಗ್ರಾಮ ಪಂಚಾಯತ್ ವ್ಯಾಪ್ತಿಯಲ್ಲಿ ಪ್ರೌಢ ಶಿಕ್ಷಣ ಪಡೆಯಲು ಸುಮಾರು 15 ಕಿ.ಮೀ. ಪ್ರಯಾಣಿಸಬೇಕಾಗಿರುವುದರಿಂದ